ಮಲಪ್ರಭಾ ನೀರಾವರಿ ಯೋಜನೆ ಬಗ್ಗೆ

75(57): ಶ್ರೀ ಚಂದ್ರ ಕಾಂತ ಬೆಲ್ಲದ(ಧಾರವಾಡ):

ಮಾನ್ಯ ಭಾರಿ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಮಲಪ್ರಭಾ ನೀರಾವರಿ ಯೋಜನೆ ಯಾವ ವರ್ಷದಲ್ಲಿ ಪ್ರಾರಂಭಿಸಲಾಯಿತು ಹಾಗೂ ಎಷ್ಟು ವರ್ಷದಲ್ಲಿ ಪೂರ್ಣಗೊಳ್ಳಬೇಕಾಗಿತ್ತು. ಯೋಜನೆಗಾಗಿ ಎಷ್ಟು ಹಣ ಒದಗಿಸಲಾಗಿದೆ;

(ಆ) ಮಲಪ್ರಭಾ ಯೋಜನೆಯಲ್ಲಿ ನೀರಾವರಿ ಯಾಗುವ ಭೂಮಿ ಎಷ್ಟು? ಅದರಲ್ಲಿ ಈಗ ಎಷ್ಟು ನೀರಾವರಿಯಾಗುತ್ತಿದೆ. ಯೋಜನೆ ಪ್ರಾರಂಭದಿಂದ ಈವರೆಗಿನ ಪ್ರತಿ ವರ್ಷದಲ್ಲಿ ನೀರಾವರಿ ಆಗಿರುವ ಭೂಮಿ ಎಷ್ಟು ಹಾಗೂ ಪ್ರತಿ ವರ್ಷ ಖರ್ಚು ಮಾಡಿದ ಹಣದ ವಿವರ ನೀಡುವುದು?

(ಇ) ಮಲಪ್ರಭಾ ಯೋಜನೆಯು ಪ್ರತಿ ತಾಲ್ಲೂಕುಗಳಲ್ಲಿ ನೀರು ಕೊಡುತ್ತಿರುವುದು ಹಾಗೂ ಇನ್ನೂ ನೀರು ಕೊಡಬೇಕಾಗಿರುವ ಭೂ ಪ್ರದೇಶವೆಷ್ಟು?(ವಿವರ ನೀಡುವುದು)

(ಈ) ಪ್ರತಿ ತಾಲ್ಲೂಕುಗಳಲ್ಲಿ ಕಾಲುವೆಗಳು ಎಷ್ಟು ಕಿ.ಮೀ. ಕಾಮಗಾರಿ ಮುಗಿದಿದೆ? ಈ ಕಾಲುವೆಗೆ ಯಾವ ವರ್ಷ ನೀರು ಬಿಡಲು ಯೋಜನೆ ಇದೆ?

ಶ್ರೀ ಕೆ.ಎನ್.ನಾಗೇಗೌಡ. (ಭಾರಿ ನೀರಾವರಿ ಸಚಿವರು)

(ಅ) ಪ್ರಾರಂಭಿಕ ವರ್ಷ 1960-61 ಮೂಲ ಯೋಜನೆ ಪ್ರಕಾರ ಪೂರ್ಣಗೊಳ್ಳಬೇಕಾದ ವರ್ಷಗಳು-7 ವರ್ಷಗಳು ಇಲ್ಲಿಯವರೆಗೆ (12:96 ವರೆಗೆ) ಯೋಜನೆಗಾಗಿ ರೂ.400.34 ಕೋಟಿ ರೂ. ಗಳನ್ನು ಒದಗಿಸಲಾಗಿದೆ.

(ಆ) ಯೋಜನೆ ಅಡಿಯಲ್ಲಿ ನಿಗದಿಪಡಿಸಿದ ನೀರಾವರಿ ಆಗುವ ಭೂಮಿ:2,18, 191 ಹೆ. ನೀರಾವರಿಗಾಗಿ ಅಳವಡಿಸಿದ ಕ್ಷೇತ್ರ (12:96 ರವರೆಗೆ) : 1,63,742 ಹೆ.

ಪ್ರತಿ ವರ್ಷದಲ್ಲಿ ನೀರಾವರಿ ಆಗಿರುವ ಭೂಮಿ ಹಾಗೂ ಖರ್ಚು ಮಾಡಿದ್ದ ವಿವರಗಳನ್ನು ಅನುಬಂಧ-1 ರಲ್ಲಿ ಕೊಡಲಾಗಿದೆ.

(ಇ) ತಾಲ್ಲೂಕುವಾರು ಭೂಮಿಗೆ ನೀರು ಕೊಡುತ್ತಿರುವ ಹಾಗೂ ಇನ್ನೂ ಕೊಬೇಕಾಗಿರುವ ಭೂ ಪ್ರದೇಶದ ವಿವರಗಳನ್ನು ಅನುಬಂಧ-2 ರಲ್ಲಿ ಕೊಡಲಾಗಿದೆ.

(ಈ) ಪ್ರತಿ ತಾಲ್ಲೂಕುಗಳಲ್ಲಿ ಬರುವ ಕಾಲುವೆಯ ಕಾಮಗಾರಿಗಳ ಹಂತವನ್ನು ಅನುಬಂಧ-3 ರಲ್ಲಿ ಕೊಡಲಾಗಿದೆ.

ಮಲಪ್ರಭಾ ಬಲದಂಡೆ ಕಾಲುವೆ ಕಿ.ಮೀ. 93ರವರೆಗೆ ಹಾಗೂ ಮಲಪ್ರಭಾ ಎಡದಂಡೆ

ಕಾಲುವೆ ಕಿ.ಮೀ. 126 ರವರೆಗೆ ಈಗಾಗಲೇ ನೀರು ಬಿಡಲಾಗಿದ್ದು, ಉಳಿದ ಕಿ.ಮೀ.ಗಳಲ್ಲಿ 2000 ಇಸವಿಯೊಳಗೆ ನೀರು ಬಿಡಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:57

ಅನುಬಂಧ-1

ಕ್ರಮ ಸಂಖ್ಯೆ	ವರ್ಷ	ನೀರಾವರಿಗೆ ಆಳವಡಿಸಿದ ಕ್ಷೇತ್ರ (ಹೆಕ್ಟೇರ್‌ಗಳಲ್ಲಿ)	ಖರ್ಚು ಮಾಡಿದ ಹಣ (ಲಕ್ಷ ರೂಗಳಲ್ಲಿ)
1	2	3	4
1.	1960-61	-	10.82
2.	1961-62	-	38.28
3.	62-63	-	45.28
4.	63-64	-	33.59
5.	64-65	-	30-26
6.	65-66	-	38.09
7.	66-67	-	88.79
8.	67-68	-	185.81
9.	68-69	-	313.33
10.	69-70	-	408.05
11.	70-71	-	432.40
12.	71-72	-	546.36
13.	72-73	-	615.03
14.	73-74	14352	633.33
15.	74-75	7390	656.23
16.	75-76	9550	1000.71
17.	76-77	13819	1225.81
18.	77-78	25517	1421.06
19.	78-79	18000	1441.86
20.	79-80	15746	1144.55
21.	80-81	1650	1089.10
22.	81-82	3941	1071.36

23.	82-83	6991	1203.12
24.	83-84	10209	1172.04
25.	84-85	3003	1160.40
26.	85-86	5857	1217.01
27.	86-87	7153	1458.72
28.	87-88	1527	1350.89
29.	88-89	1825	1529.55
30.	89-90	2280	1813.99
31.	90-91	4754	1582.61
32.	91-92	1827	1908.67
33.	92-93	782	2396.18
34.	93-94	1171	2863.72
35.	94-95	738	2803.53
36.	95-96	3374	2932.61
37.	96-97 (12:96 ರವರೆಗೆ)	2186	2210.00
	ಒಟ್ಟು	163742	40034.00

ಐಡಿ 9 ಡಬ್ಲ್ಯೂಎಲ್ 97

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:57

ಅನುಬಂಧ-2

ಕ್ರ. ಸಂ.	ಯೋಜನೆಯ ಹೆಸರು	ಜಿಲ್ಲೆ	ತಾಲ್ಲೂಕು	ಅಂತಿಮ ಕ್ಷೇತ್ರ	ನೀರಾವರಿ ಗಾಗಿ ಆಣೆ ಗೊಳಿಸಿದ ಕ್ಷೇತ್ರ (ಹೆಕ್ಟೇರ್)	ಇನ್ನುನೀರು ಕೊಡಬೇಕಾ ಗಿರುವ ಕ್ಷೇತ್ರ (ಹೆಕ್ಟೇರ್)	ಷರಾ
1.	ಮಲಪ್ರಭಾ ಯೋಜನೆ	ಬೆಳಗಾಂ	1.ಬೈಲಹೊಂಗಲ	6654	6654	-	
			2.ರಾಮದುರ್ಗ	19719	19719		
			3.ಸವದತ್ತಿ	39018	39018		
		ಬಿಜಾಪುರ	4.ಬಾದಾಮಿ	30873	18481	12392	
		ಧಾರವಾಡ	5.ನರಗುಂದ	37249	37249	-	
			6.ನವಲಗುಂದ	36773	33928	2845	
			7.ರೋಣ	41549	3907	37642	

8.ಹುಬ್ಬಳ್ಳಿ	4786	4786	-
9.ಗದಗ	1570	-	1570
ಒಟ್ಟು	218191	163742	54449

ಐಡಿ 9 ಡಬ್ಲ್ಯೂಎಲ್ಎ 97

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ :57

ಅನುಬಂಧ-3

ಕ್ರ. ಸಂ.	ಯೋಜನೆಯ ಹೆಸರು	ಕಾಲುವೆಯ ಹೆಸರು	ಕಾಲುವೆಯ ಒಟ್ಟು ಉದ್ದ	ತಾಲ್ಲೂಕುಗಳು ಸವದತ್ತಿ	ರಾಮದುರ್ಗ	ಬಾದಾಮಿ	ನವಲಗುಂದ	ಹುಬ್ಬಳ್ಳಿ	ಗದಗ	ರೋಣ
1.	ಮಲಪ್ರಭಾ	1.ಮಲಪ್ರಭಾ ಎಡದಂಡೆ ಕಾಲುವೆ	168 ಕಿಮೀ.	1ರಿಂದ 14 ಕಿಮೀ.	15ರಿಂದ 83 ಕಿಮೀ.	84ರಿಂದ 168 ಕಿಮೀ.	-	-	-	-
		2.ಮಲಪ್ರಭಾ ಬಲದಂಡೆ ಕಾಲುವೆ	138 ಕಿಮೀ	1ರಿಂದ 12 ಕಿಮೀ.	-	-	13 ರಿಂದ 50 ಕಿಮೀ. ಮತ್ತು 67 ರಿಂದ 106 ಕಿಮೀ.	51 ರಿಂದ 66 ಕಿಮೀ.	107 ರಿಂದ 109 ಕಿಮೀ.	110 ರಿಂದ 138 ಕಿಮೀ

ಟಿಪ್ಪಣಿ: 1) ಮಲಪ್ರಭಾ ಎಡದಂಡೆ ಕಾಲುವೆ:- ಕಾಲುವೆಯ ಕೆಲಸ 126 ಕಿಮೀ.ವರೆಗೆ ಮುಗಿದಿದೆ ಆದ್ದರಿಂದ ಸವದತ್ತಿ ತಾಲ್ಲೂಕಿನಲ್ಲಿ 14 ಕಿಮೀ. ಕಾಲುವೆ, ರಾಮದುರ್ಗ ತಾಲ್ಲೂಕಿನಲ್ಲಿ 69 ಕಿಮೀ. ಕಾಲುವೆ ಹಾಗೂ ಬಾದಾಮಿ ತಾಲ್ಲೂಕಿನಲ್ಲಿ 43 ಕಿಮೀ. ಕಾಲುವೆಯ ಕೆಲಸ ಮುಗಿದಿದೆ.

2) ಮಲಪ್ರಭಾ ಬಲದಂಡೆ ಕಾಲುವೆ:- ಕಿಮೀ. 94 ರಲ್ಲಿರುವ ಹಂದಿಗನಹಳ್ಳಿ ಆಕ್ವಿಡೆಕ್ಟ್ ಬಿಟ್ಟು, 99 ಕಿಮೀ. ವರೆಗೆ ಕಾಲುವೆಯ ಕೆಲಸಗಳು ಮುಗಿದಿದೆ. ಹಾಗೂ ಕಿಮೀ. 101 ರಿಂದ 107, 109 ರಿಂದ 110 ರಲ್ಲಿ ಕೂಡ ಕಾಲುವೆಯ ಕೆಲಸ ಮುಗಿದಿದೆ. ಆದ್ದರಿಂದ ಸವದತ್ತಿ ತಾಲ್ಲೂಕಿನಲ್ಲಿ 12 ಕಿಮೀ. ಕಾಲುವೆ, ನವಲಗುಂದ ತಾಲ್ಲೂಕಿನಲ್ಲಿ 76 ಕಿಮೀ. ಕಾಲುವೆ, ಹುಬ್ಬಳ್ಳಿ ತಾಲ್ಲೂಕಿನಲ್ಲಿ 16 ಕಿಮೀ. ಕಾಲುವೆ ಹಾಗೂ ಗದಗ್ ತಾಲ್ಲೂಕಿನಲ್ಲಿ 2 ಕಿಮೀ. ಕಾಲುವೆಯ ಕೆಲಸ ಮುಗಿದಿದೆ.

ಶ್ರೀ ಚಂದ್ರಕಾಂತ ಬೆಲ್ಲದ: ಮಾನ್ಯ ಅಧ್ಯಕ್ಷರೆ, ಮಲಪ್ರಭಾ ನೀರಾವರಿ ಯೋಜನೆ ಯಾವ ವರ್ಷದಲ್ಲಿ ಪ್ರಾರಂಭಿಸಲಾಯಿತು ಹಾಗೂ ಎಷ್ಟು ವರ್ಷದಲ್ಲಿ ಪೂರ್ಣಗೊಳ್ಳಬೇಕಾಗಿತ್ತು ಯೋಜನೆಗಾಗಿ ಎಷ್ಟು ಹಣ ಒದಗಿಸಲಾಗಿದೆ ಎಂಬ ಪ್ರಶ್ನೆಯನ್ನು ನಾನೂ ಕೇಳಿದ್ದೆ. 1960-61 ರಲ್ಲಿ ಯೋಜನೆ ಪ್ರಾರಂಭವಾಗಿ, ಮೂಲ ಯೋಜನೆ ಪ್ರಕಾರ ಏಳು ವರ್ಷದಲ್ಲಿ ಮುಗಿಯಬೇಕಾಗಿತ್ತು ಎಂದು ಉತ್ತರದಲ್ಲಿ ತಿಳಿಸಿದ್ದಾರೆ, ಆದರೆ ಈಗ ಯೋಜನೆಗೆ 30 ವರ್ಷಗಳ ಕಾಲ ಹೆಚ್ಚಿಗೆ ತೆಗೆದುಕೊಂಡಿದ್ದಾರೆ. 30 ವರ್ಷ ಹೆಚ್ಚಿಗೆ ತೆಗೆದು ಕೊಂಡಿರುವುದಕ್ಕೆ ಎಷ್ಟು ಹಣದಲ್ಲಿ ಮುಗಿಯುತ್ತದೆ, ಎಂಬ ಮಾಹಿತಿಯನ್ನು ಕೊಡಬೇಕಾಗಿದೆ 30 ವರ್ಷದಲ್ಲಿ ಯೋಜನೆ ಮುಗಿಯಬೇಕಾಗಿದೆ ಎಂದರೂ ಸಹ ಇನ್ನೂ ಕಾಲು ಭಾಗದ ಕೆಲಸ ಮುಗಿದಿಲ್ಲ. ಇದಕ್ಕೆ ಎಷ್ಟು ವರ್ಷ ತೆಗೆದುಕೊಳ್ಳುತ್ತೀರಿ ಎಂಬ ಒಂದು ಮಾಹಿತಿಯನ್ನು ಕೊಡಬೇಕು. ಈಗಾಗಲೇ ಎಷ್ಟೋ ನೀರಾವರಿ ಪ್ರದೇಶದಲ್ಲಿ ಮೇನ್ ಲ್ಯಾಂಡಿಗೆ ಇನ್ನೂ ನೀರು ಮುಟ್ಟುತ್ತಾ ಇಲ್ಲ. ಅನೇಕ ಕಡೆ ಕೊಳವೆ ಬಾವಿಗಳು ಇದ್ದರೂ ಸರಿಯಾಗಿ ನೀರು ಮುಟ್ಟುತ್ತಾ ಇಲ್ಲ. ನೀರು ಮುಟ್ಟುವ ಹಾಗೆ ಎನು ಯೋಜನೆ ತೆಗೆದು ಕೊಂಡಿದ್ದೀರಿ. ಎರಡನೆಯ ಪ್ರಶ್ನೆ ಇನ್ನೂ ನೀರಾವರಿ ಕೊಡಬೇಕಾಗಿರುವ ಕ್ಷೇತ್ರದಲ್ಲಿ ಯೋಜನೆ ಪೂರ್ಣಗೊಳ್ಳಬೇಕಾದರೆ ಇನ್ನೂ 54,449 ಹೆಕ್ಟೇರ್‌ಗೆ ನೀರು ಕೊಡಬೇಕಾಗಿದೆ ಎಂದು ತಿಳಿಸಿದ್ದಾರೆ. ಎಷ್ಟು ವರ್ಷದಲ್ಲಿ ಈ ಯೋಜನೆ ಮುಗಿಸುತ್ತೀರಿ ಎಂದು ತಿಳಿಸಬೇಕು. ಇದಲ್ಲದರ ಜೊತೆಗೆ ಮಹದಾಯಿ ಯೋಜನೆ ಎಷ್ಟು ತೀವ್ರವಾಗಿ ಮಲಪ್ರಭಾ ಪ್ರಾಜೆಕ್ಟ್‌ಗೆ ಜೋಡಿಸುತ್ತೀರಿ. ಮಹಾದಾಯಿ ನೀರಾವರಿ ಯೋಜನೆ ಎಷ್ಟು ವರ್ಷದಲ್ಲಿ ಮಾಡುತ್ತೀರಿ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಕೆ ಎನ್ ನಾಗೇಗೌಡ: ಮಾನ್ಯ ಅಧ್ಯಕ್ಷರೆ, ಮಲಪ್ರಭಾ ನೀರಾವರಿ ಯೋಜನೆ ಮೂಲ ಯೋಜನೆ ಪ್ರಕಾರ ಏಳು ವರ್ಷದಲ್ಲಿ ಪೂರ್ಣಗೊಳ್ಳಬೇಕೆಂದು ಅಂದಾಜು ಮಾಡಿ ಇದಕ್ಕೆ 20 ಕೋಟಿ ರೂಪಾಯಿ ಅಂದಾಜು ಮಾಡಲಾಗಿತ್ತು. ಈ 20 ಕೋಟಿ ಅಂದಾಜು 528 ಕೋಟಿ ರೂಪಾಯಿ ಅಂದಾಜು ಆಗಿದೆ. ಇಲ್ಲಿಯವರೆಗೆ ನಾವು 400 ಕೋಟಿ ರೂಪಾಯಿ ಮೇಲೆ ಖರ್ಚು ಮಾಡಿದ್ದೇವೆ. ಇನ್ನೂ 425 ಕೋಟಿ ರೂಪಾಯಿ ಖರ್ಚು ಮಾಡಬೇಕಾಗಿದೆ. ಈ ವರ್ಷ 31ರವರೆಗೆ 31 ಕೋಟಿ ಖರ್ಚು ಮಾಡಿದ್ದೇವೆ. ಒಟ್ಟು ನಾವು 2,18,191 ಹೆಕ್ಟೇರ್ ಜಮೀನಿಗೆ ನೀರು ಕೋಡಬೇಕಾಗಿದೆ. ಅದರಲ್ಲಿ ಸುಮಾರು 55 ಲಕ್ಷ ಹೆಕ್ಟೇರ್‌ಗೆ ಕೋಡಬೇಕಾಗಿದೆ. ಮಲಪ್ರಭಾ ಬಲ ದಂಡೆ ಕಾಲುವೆಗೆ 93 ಕಿಲೋ ನೀರು ಬಿಡಲಾಗಿದೆ. 69 ಕಿಲೋ ಮೀಟರ್ ಎಡದಂಡೆಗೆ ನೀರು ಬಿಡಬೇಕಾಗಿದೆ. ಇದರಿಂದ 125 ಕಿಲೋ ಮೀಟರ್‌ವರೆಗೆ ಕಲ್ಟಿವೇಷನ್ ಆಗುತ್ತದೆ. ಈ ಕೆಲಸಗಳನ್ನು ನಾವು ತುರ್ತಾಗಿ ತೆಗೆದುಕೊಂಡಿದ್ದೇವೆ. 126 ಕಿಲೋ ಮೀಟರ್‌ವರೆಗೆ ನೀರು ಬಿಡಲಾಗಿದ್ದು 2000 ಇಸವಿಯೊಳಗೆ ಎರಡು ಲಕ್ಷ 18 ಸಾವಿರ ಹೆಕ್ಟೇರ್‌ಗೆ ನೀರು ಕೊಡುತ್ತೇವೆ ಎಂಬ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇನ್ನು ಉಳಿದ ಮಹದಾಯಿ ವಿಚಾರದಲ್ಲಿ ಗೋವಾದವರು ಹಾಗೂ ಕರ್ನಾಟಕ ಎರಡೂ ರಾಜ್ಯಗಳವರೂ ಸೇರಿ ಕಂಬೈನ್ಡ್ ಪ್ರಾಜೆಕ್ಟ್ ಮಾಡಿ ಇಬ್ಬರೂ ಉಪಯೋಗಿಸಿಕೊಳ್ಳಬೇಕು ಎಂಬ ಯೋಜನೆ ಇದೆ. ಅಧಿವೇಶನ ಮುಗಿದ ನಂತರ ನಾವು ಹಾಗೂ ಗೋವಾ ಮುಖ್ಯಮಂತ್ರಿಗಳೊಂದಿಗೆ ಮಾತನಾಡುವವರಿದ್ದೇವೆ.

ಫೆಬ್ರವರಿ ಮೊದಲನೇ ವಾರದಲ್ಲಿ ಮಾತುಕತೆ ಆಗಬೇಕಿತ್ತು. ಅಧಿವೇಶನ ಮುಗಿದ ನಂತರ ಇಬ್ಬರು ಮುಖ್ಯಮಂತ್ರಿಗಳೂ ಸೇರಿ ಇದರ ಬಗ್ಗೆ ಇತ್ಯರ್ಥ ಮಾಡಿ ಜಾಯಿಂಟ್ ಡ್ಯಾಮ್ ಮಾಡುವ ವಿಚಾರಕ್ಕೆ ಅವರು ಒಪ್ಪಿಕೊಳ್ಳಬಹುದೆಂದು ನನ್ನ ಭಾವನೆ. 2000 ಇಸವಿಯೊಳಗೆ ಉಳಿದ ಕಾಮಗಾರಿಗಳನ್ನು ಮುಗಿಸುವವರಿದ್ದೇವೆ.

ಉಪಾಧ್ಯಕ್ಷರು: ಮಾನ್ಯ ಅಧ್ಯಕ್ಷರೆ, ಮಲಪ್ರಭಾ ಯೋಜನೆಯಲ್ಲಿ ಮಹದಾಯಿ ನದಿ ನೀರನ್ನು ಒದಗಿಸಿಕೊಡುತ್ತೇವೆಂದು ಸಚಿವರು ಈಗಾಗಲೇ ಒಪ್ಪಿಕೊಂಡಿದ್ದಾರೆ. ಆದರೆ, ಕಳೆದ ಹತ್ತು ವರ್ಷಗಳಲ್ಲಿ ಕಳಸಾದಲ್ಲಿ ಒಮ್ಮೆ ಮಾತ್ರ ನೀರಿನಿಂದ ತುಂಬಿದೆಯೆಂತಲೂ ಹೇಳಿದ್ದಾರೆ. ಆದರೆ, ಹುಬ್ಬಳ್ಳಿ-ಧಾರವಾಡ ನಗರಕ್ಕೆ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಎರಡನೇ ಹಂತದ ಯೋಜನೆಯಿಂದ ನಾಲ್ಕು ಟಿಎಂಸಿಯಷ್ಟು ನೀರು ಬೇಕಾಗುತ್ತದೆಂದು ನಾನು ಈ ಹಿಂದೆ ಮೇಯರ್ ಅವರನ್ನು ಭೇಟಿಯಾಗಿದ್ದಾಗ ಮಾತುಕತೆಯ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. 36 ಟಿಎಂಸಿಯಷ್ಟು ನೀರನ್ನು ಸಂಗ್ರಹಿಸಲು ಯೋಜನೆಯನ್ನು ಏನು ತಯಾರಿಸಲಾಗಿದೆ, ಇವೊತ್ತು ಅಲ್ಲಿ 10-15 ಟಿಎಂಸಿಗಿಂತ ಹೆಚ್ಚು ಪ್ರಮಾಣದಲ್ಲಿ ನೀರು ನಿಲ್ಲುವುದಿಲ್ಲ. ಈಗ 4 ಟಿಎಂಸಿಯಷ್ಟು ನೀರನ್ನು ನೀರಾವರಿ ಉದ್ದೇಶಕ್ಕಾಗಿ ಕೊಡುತ್ತಿದ್ದೀರಾ? ಅಥವಾ ಕುಡಿಯುವುದಕ್ಕಾಗಿ ಕೊಡುತ್ತಿದ್ದೀರಾ:? ತಿಳಿಸಬೇಕು. ಎರಡನೆಯದಾಗಿ, ಉಳಿದಿರುವ ಯೋಜನೆಗಳನ್ನು 2000 ಇಸವಿಯೊಳಗಾಗಿ ಮುಗಿಸಲು ಬರುವ ಮೂರು ವರ್ಷಗಳಿಗೆ ಎಷ್ಟು ಹಣವನ್ನು ಒದಗಿಸುತ್ತೀರಿ ಎಂಬುದಕ್ಕೆ ಸ್ಪಷ್ಟವಾದ ಉತ್ತರವನ್ನು ತಮ್ಮ ಮುಖಾಂತರ ಸಚಿವರಿಗೆ ಕೇಳುತ್ತಿದ್ದೇನೆ.

ಶ್ರೀ ಕೆ.ಎನ್.ನಾಗೇಗೌಡ: ನಾನು ಮಾನ್ಯ ಉಪಾಧ್ಯಕ್ಷರಿಗೆ ಉತ್ತರಿಸುವುದಾದರೆ, ನಾವು ನಾಲ್ಕು ಟಿಎಂಸಿಯಷ್ಟು ನೀರನ್ನು ತರುತ್ತಿರುವುದು ನೂರಕ್ಕೆ ನೂರರಷ್ಟು ನೀರಾವರಿ ಉದ್ದೇಶಕ್ಕೋಸ್ಕರವೇ ಹೊರತು ಕುಡಿಯುವುದಕ್ಕಲ್ಲ. ಈ ನಾಲ್ಕು ಟಿಎಂಸಿಯಷ್ಟು ನೀರನ್ನು ಕಳಸಾದಿಂದ ತರುತ್ತಿದ್ದು, ಇನ್ನೂ 64 ಕಿಲೋಮೀಟರ್‌ಗಳಷ್ಟು ನಾಲಾ ತೆಗೆಯಬೇಕಾಗಿರುತ್ತದೆ. ಅಲ್ಲಿರುವ ಅಚ್ಚುಕಟ್ಟು ಪ್ರದೇಶ ಎರಡು ಲಕ್ಷ ಎಕರೆಗಳಿಗಿಂತಲೂ ಹೆಚ್ಚಿರುವುದರಿಂದ ಕಲ್ಪಿಸುತ್ತಿರುವ ನೀರಿನ ಸೌಲಭ್ಯ ಸಾಕಾಗುತ್ತಿಲ್ಲವಾದ್ದರಿಂದ ಕಳಸಾದಿಂದ ಮೂರು, ಅಥವಾ ನಾಲ್ಕು ಟಿಎಂಸಿಯಷ್ಟು ನೀರನ್ನು ಸಂಪೂರ್ಣವಾಗಿ ಅಚ್ಚುಕಟ್ಟು ಪ್ರದೇಶಕ್ಕೆ ಕಲ್ಪಿಸಿ ಪ್ರದೇಶವನ್ನು ಬಲ ಪಡಿಸಬೇಕಾಗಿರುವುದರಿಂದ ಆ ನೀರನ್ನು ನೀರಾವರಿ ಉದ್ದೇಶಕ್ಕೆ ಹೊರತು ಕುಡಿಯುವುದಕ್ಕಲ್ಲವೆಂದು ಸ್ಪಷ್ಟವಾಗಿ ಈ ಸದನದಲ್ಲಿ ತಮ್ಮ ಮುಖಾಂತರ ಮಾನ್ಯ ಉಪಾಧ್ಯಕ್ಷರಿಗೆ ತಿಳಿಸುತ್ತಿದ್ದೇನೆ. ಇನ್ನೊಂದು ವಿಚಾರವಾಗಿ ಹೇಳುವುದಾದರೆ, 128 ಕೋಟಿ ರೂಪಾಯಿಗಳನ್ನು ಬರೀ ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ಖರ್ಚು ಮಾಡುತ್ತಿದ್ದೇವೆ. ಆದುದರಿಂದ, ಬೆಳಗಾಂ ಮತ್ತು ಧಾರವಾಡ ಜಿಲ್ಲೆಗಳಿಗೆ ಅದರಲ್ಲೂ ವಿಶೇಷವಾಗಿ ಈ ಸಾರಿ ಘಟಪ್ರಭಾ ಮತ್ತು ಮಲಪ್ರಭಾ ಯೋಜನೆಗಳಿಗೆ ಹೆಚ್ಚು ಒತ್ತು ಕೊಟ್ಟು ಇರತಕ್ಕಂಥ ಅನ್ ಗೋಯಿಂಟ್ ಪ್ರಾಜೆಕ್ಟ್‌ಗಳನ್ನು ಮುಗಿಸುವುದಕ್ಕೆ ಹೆಚ್ಚು ಹಣ ಕೊಡಬೇಕೆಂದು ಹಣಕಾಸು ಮಂತ್ರಿಗಳಿಗೆ ನೋಟ್ ಸಹ ಕಳುಹಿಸಿದ್ದೇನೆ. ಬರುವ 1997-98ನೇ ಸಾಲಿನ ಆಯವ್ಯಯದಲ್ಲಿ ಹೆಚ್ಚು ಹಣ ಒದಗಿಸುವುದಕ್ಕೆ ಪ್ರಯತ್ನ ಮಾಡಿ 2000 ಇಸವಿಯೊಳಗೆ ಮಲಪ್ರಭಾ ಯೋಜನೆಯನ್ನು ಪೂರ್ತಿಗೊಳಿಸಿ ನೀರು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಚಂದ್ರಕಾಂತ ಬೆಲ್ಲದ: ಮಲಪ್ರಭಾ ಯೋಜನೆ ಪ್ರಾರಂಭವಾಗಿ ಏಳು ವರ್ಷಗಳಲ್ಲಿ

ಮುಗಿಸಿ 2,18,191 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಿಕೊಡಬೇಕಾಗಿತ್ತು. ಆದರೆ, 1967ರಲ್ಲಿ ಮುಗಿಯಬೇಕಾಗಿದ್ದಂಥ ಯೋಜನೆ 1997ನೇ ಇಸವಿಯಾದರೂ ಅಂದರೆ ಮೂವತ್ತು ವರ್ಷಗಳನ್ನು ತೆಗೆದುಕೊಂಡರೂ ಸಹ ಇನ್ನೂ ಪೂರ್ಣಗೊಂಡಿಲ್ಲ. ಇಷ್ಟೇ ಅಲ್ಲದೆ, ಕೇವಲ 20 ಕೋಟಿ ರೂಪಾಯಿಗಳಲ್ಲಿ ಮುಗಿಯಬೇಕಾಗಿದ್ದಂಥ ಯೋಜನೆ ಇವ್ವೊತ್ತು 528 ಕೋಟಿ ರೂಪಾಯಿಗಳವರೆಗೆ ಬಂದಿದೆ. ಈಗ ಮಲಪ್ರಭಾ ಯೋಜನೆಗೆ ಮಹದಾಯಿಯನ್ನು ತಂದು ಜೋಡಿಸುವುದರ ಮೂಲಕ ಯೋಜನೆಯನ್ನು ಪೂರ್ಣಗೊಳಿಸಬೇಕಾಗುತ್ತದೆ. ಮತ್ತು ಹುಬ್ಬಳ್ಳಿ ಮತ್ತು ಧಾರವಾಡ ಮಹಾನಗರಗಳಿಗೆ ಕುಡಿಯುವ ನೀರು ಕಲ್ಪಿಸಲು ಮೂರನೇ ಹಂತದ ಯೋಜನೆಗೆ ಈಗಾಗಲೇ ಹಣ ಖರ್ಚು ಮಾಡಿದ್ದು ಯೋಜನೆ ಶುರುವಾಗಿರುವುದರಿಂದ ಆದಷ್ಟು ಬೇಗ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಿ ಕೊಡಬೇಕು. ಅಲ್ಲದೆ, ಉಳಿದಿರುವ ಯೋಜನೆಗಳನ್ನು 2000 ಇಸವಿಯೊಳಗೆ ಮುಗಿಸಲು ತ್ವರಿತವಾದ ಕಾರ್ಯಕ್ರಮ ಹಾಕಿಕೊಂಡು ಮುಗಿಸಬೇಕು ಮತ್ತು ಕಾಲುವೆಗಳ ನಿರ್ಮಾಣಕ್ಕೆ ಸರ್ಕಾರ ಬಹಳಷ್ಟು ಹಣ ಖರ್ಚು ಮಾಡಿದ್ದು ತಮ್ಮ ಜಮೀನುಗಳಿಗೆ ನೀರು ಹರಿದು ತಾವು ನೀರಾವರಿ ಸೌಲಭ್ಯ ಪಡೆದುಕೊಳ್ಳಬಹುದೆಂದು ಜನರು ಕಾಯುತ್ತಿದ್ದಾರೆ. ಆದುದರಿಂದ, 54,000 ಹೆಕ್ಟೇರ್ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜನಾ ಕಾಮಗಾರಿಯನ್ನು ಕೈಗೊಂಡು ಬರುವ ಮೂರು ವರ್ಷಗಳಲ್ಲಿ ಮುಗಿಸುತ್ತೀರಾ, ಹೇಗೆ? ಹಾಗೂ ಆ ಭಾಗದ ಅನೇಕ ಕಡೆಗಳಲ್ಲಿರುವ ಕೊನೇ ಭಾಗದ ಪ್ರದೇಶಗಳಿಗೆ ನೀರಿನ ಸೌಲಭ್ಯ ಮುಟ್ಟುತ್ತಿಲ್ಲವಾದ್ದರಿಂದ ಅಲ್ಲಿಯವರೆವಿಗೂ ನೀರನ್ನು ಒದಗಿಸುವುದಕ್ಕೆ ಯೋಚಿಸಿದ್ದೀರಾ? ಎಂದು ಸಚಿವರಲ್ಲಿ ಕೇಳುತ್ತಿದ್ದೇನೆ.

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿರುವಂತೆ ಬರುವ ಮೂರು ವರ್ಷಗಳಲ್ಲಿ 128 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅಷ್ಟರೊಳಗೆ ಉಳಿದುಕೊಂಡಿರುವ ಎಲ್ಲಾ ಯೋಜನೆಗಳನ್ನು ಮುಗಿಸಿ 60,000 ಹೆಕ್ಟೇರ್ ಪ್ರದೇಶಕ್ಕೆ ನೀರಿನ ಸೌಲಭ್ಯ ಕಲ್ಪಿಸಲು ತ್ವರಿತ ರೀತಿಯ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಅಲ್ಲಿಗೆ ನಾನು 2-3 ಬಾರಿ ಭೇಟಿ ಕೊಟ್ಟು ಬಂದಿದ್ದು ಅಲ್ಲಿ ಕೆಲಸ ತ್ವರಿತ ಗತಿಯಲ್ಲಿ ನಡೆಯುತ್ತಿದ್ದು ಖಂಡಿತವಾಗಿಯೂ 2000 ಇಸವಿ ವೇಳೆಗೆ ನೀರಿನ ಸೌಲಭ್ಯ ಕೊಡುತ್ತೇವೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಈಗ ಎಡದಂಡೆ ಕಾಲುವೆ ಮತ್ತೆ ಬ್ರೀಜ್ ಆಗಿರುವುದರಿಂದ ಈ ವರ್ಷ ನೀರು ಕೊಡುವುದಕ್ಕೆ ಸಾಧ್ಯವಾಗಿಲ್ಲ, ಅಧಿಕಾರಿಗಳ ನಿರ್ಲಕ್ಷ್ಯತನದಿಂದ ಇದು ಒಡೆದುಹೋಗಿರುತ್ತದೆ. ಆದುದರಿಂದ, ಆದಷ್ಟು ಶೀಘ್ರವಾಗಿ ಇದನ್ನು ದುರಸ್ತಿಗೊಳಿಸಲು ಕ್ರಮ ಕೈಕೊಂಡರೆ ಇದರಿಂದುಂಟಾಗುವ ಅಪಾಯ ತಪ್ಪುತ್ತದೆ. ಮಹದಾಯಿ ನದಿ ನೀರನ್ನು ಉಪಯೋಗಿಸಿಕೊಳ್ಳುವ ಬಗ್ಗೆ, ಸುಮಾರು ವರ್ಷಗಳಿಂದ ಕಾರ್ಯಕ್ರಮ ಹಮ್ಮಿಕೊಂಡು ಏನು ಪ್ರಯತ್ನ ಪಡುತ್ತಿದ್ದೀರಿ, ಅದು ಸಂತೋಷದ ವಿಷಯ. ಮಹದಾಯಿ ನದಿಯ ಜೋಡಣೆ ಕಾರ್ಯ ಆದಷ್ಟು ಶೀಘ್ರ ಕಾರ್ಯಗತಗೊಳ್ಳುವಂತೆ ಕ್ರಮ ಕೈಗೊಳ್ಳಬೇಕು.

ಶ್ರೀ ಕೆ.ಎನ್.ನಾಗೇಗೌಡ: ಎಡದಂಡೆ ಕಾಲುವೆಯಲ್ಲಿ ಬ್ಲಾಕ್ ಕಾಟನ್ ಸಾಯಿಲ್ ಇರುವುದರಿಂದ ಸರಿಯಾದ ರೀತಿಯಲ್ಲಿ ಕಾಲುವೆಯನ್ನು ತೆಗೆದಿಲ್ಲವಾದ್ದರಿಂದ ಎಡದಂಡೆ ಕಾಲುವೆಯನ್ನು ಪೂರ್ತಿಯಾಗಿ ರಿ-ಮಾಡೆಲ್ ಮಾಡಬೇಕಾಗುತ್ತದೆ. ಆದುದರಿಂದ, ಇದನ್ನು

ಟೆಕ್ನಿಕಲ್ ಕಮಿಟಿಗೆ ರೆಫರ್ಸ್ ಮಾಡಿದ್ದೇವೆ, ಟೆಕ್ನಿಕಲ್ ಕಮಿಟಿಯ ವರದಿ ಬಂದ ನಂತರ ಆ ಕುರಿತು ನಿರ್ಧಾರ ಕೈಗೊಳ್ಳುತ್ತೇವೆ.

ಅಧ್ಯಕ್ಷರು: ಇಲ್ಲಿಗೆ ಪ್ರಶ್ನೋತ್ತರ ಮುಗಿಯಿತು.

(ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಪಿ.ಜಿ.ಆರ್.ಸಿಂಧ್ಯ(ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ದಿನಾಂಕ 18.2.97ರಂದು ಸದನದಲ್ಲಿ ಉತ್ತರಿಸಬೇಕಾದ ಐದನೇ ಪಟ್ಟಿಯಲ್ಲಿರುವ 123 ಪ್ರಶ್ನೆಗಳ ಪೈಕಿ 93 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದಿಡುತ್ತಿದ್ದೇನೆ.

ಹುಬ್ಬಳ್ಳಿಯಲ್ಲಿ ಪಡಿತರ ಚೀಟಿ ವಿತರಣೆ

176 (352) ಶ್ರೀ ಅಶೋಕ ಕಾಟವೆ (ಹುಬ್ಬಳ್ಳಿ):

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು. ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಹುಬ್ಬಳ್ಳಿಯಲ್ಲಿ ಕಳೆದ ಒಂದು ವರ್ಷದಿಂದ ಪಡಿತರ ಚೀಟಿ ವಿತರಣೆ ಸ್ಥಗಿತಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ತುರ್ತು ಕ್ರಮಗಳೇನು;

(ಇ) ಹಾಲಿ ಪಡಿತರ ಚೀಟಿ ಕೋರಿ ಬಂದ ಅರ್ಜಿಗಳೆಷ್ಟು; ಅವುಗಳನ್ನು ಎಷ್ಟು ಕಾಲಾವಧಿಯಲ್ಲಿ ವಿತರಿಸಲಾಗುವುದು?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು.)

(ಅ) ಇಲ್ಲ. ಪಡಿತರ ಚೀಟಿಗಳನ್ನು ನೀಡುವುದನ್ನು ತಾತ್ಕಾಲಿಕವಾಗಿ ದಿನಾಂಕ 1-10-96 ರಿಂದ ತಡೆಹಿಡಿಯಲಾಗಿದೆ. ಏಕೆಂದರೆ, ಇಲಾಖೆಯು ನಕಲು ಪಡಿತರ ಚೀಟಿಗಳನ್ನು ಪತ್ತೆ ಹಚ್ಚಿ ರದ್ದುಪಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು. ಈ ಕಾರ್ಯಕ್ರಮವು ಮಾರ್ಚ್ 1997ರ ವೇಳೆಗೆ ಮುಕ್ತಾಯವಾಗುವ ನಿರೀಕ್ಷೆ ಇದೆ. ಇದಾದನಂತರ ಪಡಿತರ ಚೀಟಿಗಳನ್ನು ಮಾರ್ಚ್ 1997 ರಿಂದ ನೀಡಲಾಗುವುದು.

(ಆ) ಉದ್ಭವಿಸುವುದಿಲ್ಲ.

(ಇ) ದಿನಾಂಕ 20-9-96ರ ವರೆಗೆ 5404 ಪಡಿತರ ಚೀಟಿಗಳಿಗಾಗಿ ಸಲ್ಲಿಸಲಾದ ಅರ್ಜಿಗಳ ಬಾಕಿ ಇದೆ. ಈ ಅರ್ಜಿಗಳನ್ನು ಸರ್ಕಾರದ ಸುತ್ತೋಲೆ ಸಂಖ್ಯೆ: ಎಫ್ಪಿಎನ್ 20 ಡಿಆರ್ಎ 97, ದಿನಾಂಕ 5-2-97 ರಲ್ಲಿ ನೀಡಲಾಗಿರುವ ಮಾರ್ಗದರ್ಶಿಗಳಂತೆ ಪರಿಶೀಲಿಸಿ ಚೀಟಿಗಳನ್ನು ವಿತರಿಸಲಾಗುವುದು.

ಬಳ್ಳಾರಿ ಜಿಲ್ಲೆಯಲ್ಲಿ ಸಾರ್ವಜನಿಕ ವಿತರಣೆ ಪದ್ಧತಿ.

179(440) ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು):

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) 26-1-97 ರಿಂದ ಸರ್ಕಾರ ಹೊಸ ಸಾರ್ವಜನಿಕ ವಿತರಣೆ ಪರಿಪಾಠಿಯನ್ನು ರಾಜ್ಯದಲ್ಲಿ ಜಾರಿಗೊಳಿಸಿದೆಯೇ;